ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಎಲ್ಲೆಲ್ಲಿ ಕೊರತೆ ಇದೆಯೆಂಬ ಬಗ್ಗೆ ಪಟ್ಟಿಯನ್ನು ಕಳುಹಿಸಿಕೊಡುವಂತೆ ತಿಳಿಸಿ, ತಕ್ಷಣ ಅವರಿಗೆ ಏನೇನು ಕೊರತೆ ಇದೆಯೆಂಬುದನ್ನು ನೋಡಿ, ಆದಷ್ಟು ಬೇಗನೆ ನಾನು ಮಾಡಿ ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಜಯಚಂದ್ರರವರು KHSDRP ಯ ಆಸ್ಪತ್ರೆ ಕಟ್ಟಡಗಳ ಬಗ್ಗೆ ಪ್ರಶ್ನೆಯನ್ನು ಕೇಳಿದರು. ನಿಮ್ಮ ಬಳಿ ಮಾಹಿತಿ ಇದ್ದರೆ ಕೊಡಿ, ಇಲ್ಲದಿದ್ದರೆ ಅವರಿಗೆ ಮಾಹಿತಿಯನ್ನು ಒದಗಿಸಿ ಕೊಡಿ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಆದಷ್ಟು ಬೇಗ ಒದಗಿಸಿ ಕೊಡುತ್ತೇನೆ.

ಮತೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಗಳು

(217) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) :– ಮಾನ್ಯ ಹಜ್, ವಕ್ಫ್, ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮತೀಯ ಅಲ್ಪಸಂಖ್ಯಾತರ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳು ಯಾವುವು ;

ಆ) ಈ ಯೋಜನೆಗಳ ಫಲಾನುಭವಿಗಳಿಗೆ ನಿಗದಿಪಡಿಸಲಾಗಿರುವ ಅರ್ಹತೆಗಳು ಯಾವುವು ; ಅವುಗಳನ್ನು ಸರಳಗೊಳಿಸಿ ಅರ್ಹರು ಬಹುಸಂಖ್ಯೆಯಲ್ಲಿ ಪಡೆಯಲು ಅನುಕೂಲವಾಗುವಂತೆ ಮಾಡಲು ಸರ್ಕಾರದ ಸಕಾಲಿಕ ಕ್ರಮಗಳೇನು ;

ಇ) ಕಳೆದ ಎರಡು ವರ್ಷಗಳಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ಎಷ್ಟು ಜನರಿಗೆ ಈ ಯೋಜನೆಯ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ ?

ಪ್ರೊ. ಡಾ॥ ,ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):–

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಮತೀಯ ಅಲ್ಪಸಂಖ್ಯಾತರ ಸಮಗ್ರ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಂಡಿದೆ :–

1. ಸ್ವಾವಲಂಬನ ಸಾಲದ ಯೋಜನೆ.
2. ಸಹಾಯಧನ ಯೋಜನೆ.
3. ಅರಿವು (ವಿದ್ಯಾಭ್ಯಾಸ) ಸಾಲ ಯೋಜನೆ.
4. ಗಂಗಾ ಕಲ್ಯಾಣ ಯೋಜನೆ.

5. ಶ್ರಮಶಕ್ತಿ ಯೋಜನೆ.

6. ಭೂ ಖರೀದಿ ಯೋಜನೆ.

7. ಮೈಕ್ರೋ ಸಾಲದ ಯೋಜನೆ.

8. ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ನೇರಸಾಲ ಯೋಜನೆ.

ಆ) ನಿಗಮದ ಯೋಜನೆಗಳ ಸಾಲ ಸೌಲಭ್ಯವನ್ನು ಪಡೆಯಲು ಬೇಕಾಗಿರುವ ಅರ್ಹತೆಗಳು ಈ ಕೆಳಕಂಡಂತಿವೆ :–

1. ಫಲಾನುಭವಿಯು ಮತೀಯ ಅಲ್ಪಸಂಖ್ಯಾತರ ಗುಂಪಿಗೆ ಸೇರಿದವರಾಗಿರಬೇಕು.

2. ಫಲಾನುಭವಿಯು ವಾರ್ಷಿಕ ಆದಾಯ ಮಿತಿಯು ಸ್ವಾವಲಂಬನ ಸಾಲದ ಯೋಜನೆ, ಸಹಾಯಧನ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಶ್ರಮಶಕ್ತಿ ಯೋಜನೆ, ಭೂ ಖರೀದಿ ಯೋಜನೆ ಮತ್ತು ಮೈಕ್ರೋ ಸಾಲದ ಯೋಜನೆಗೆ ರೂ. 22,000/–ಗಳ ಒಳಗಿರಬೇಕು. ಅರಿವು (ವಿದ್ಯಾಭ್ಯಾಸ) ಸಾಲ ಯೋಜನೆಗೆ ರೂ. 1,00,000/–ಗಳ ಒಳಗಿರಬೇಕು, ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ನೇರಸಾಲ ಯೋಜನೆಗೆ ಗ್ರಾಮಾಂತರ ಫಲಾನುಭವಿಗಳಿಗೆ ರೂ.31,952/–ಗಳು ಮತ್ತು ನಗರ ಪ್ರದೇಶದ ಫಲಾನುಭವಿಗಳಿಗೆ ರೂ.42,412/–ಗಳಾಗಿರಬೇಕು.

3. ಫಲಾನುಭವಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

ಸದ್ಯದ ಪರಿಸ್ಥಿತಿಯಲ್ಲಿ ಮೇಲಿನ ಅರ್ಹತೆಗಳನ್ನು ಸರಳಗೊಳಿಸಿರುವುದಿಲ್ಲ.

ಇ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 2006–07ನೇ ಸಾಲಿನಲ್ಲಿ 26,019 ಜನ ಫಲಾನುಭವಿಗಳಿಗೆ ಹಾಗೂ 2007–08ನೇ ಸಾಲಿನಲ್ಲಿ 31,735 ಜನ ಫಲಾನುಭವಿಗಳಿಗೆ ಒಟ್ಟಾರೆ 57754 ಜನ ಫಲನುಭವಿಗಳಿಗೆ ಸಾಲ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಶ್ರೀ ಎನ್.ಎ. ಹ್ಯಾರಿಸ್ : ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆಗಳಿಗೆ ಸರ್ಕಾರದಿಂದ ಬಂದಿದೆ. ಆದರೆ ನಾನು ಹೇಳಲಿಚ್ಛಿಸುವುದೇನೆಂದರೆ ಉತ್ತರದಲ್ಲಿ ಯೋಜನೆಗಳ ಬಗ್ಗೆ ಕೊಟ್ಟಿದ್ದಾರೆ. ಬಜೆಟ್‌ನಲ್ಲಿ ಅದಕ್ಕೋಸ್ಕರ ಹಣವನ್ನು ಮೀಸಲಿರಿಸಿದ್ದಾರೆ. ಆದರೆ ಫಲಾನುಭವಿಗಳಿಗೆ ಕಾನೂನು ಪ್ರಕಾರ ಇವರು 22 ಸಾವಿರ limitation ಏನು ಇದೆ.

ಒಂದು ವರ್ಷಕ್ಕೆ 22,000 ವೆಂದರೆ ಅದು ಬಹಳ ಕಡಿಮೆಯಾಯಿತೆಂದು ನನಗನಿಸುತ್ತದೆ. ಅದೇ ಪ್ರಕಾರ education loanಗೆ ಒಂದು ಲಕ್ಷ ರೂಪಾಯಿಗಳನ್ನು ಮಾಡಿದ್ದಾರೆ, ಅದೇ ರೀತಿಯಾಗಿ ನೇರವಾಗಿ ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದಿಂದ ಕೊಡುವಂಥಾದ್ದು ಗ್ರಾಮೀಣ ಪ್ರದೇಶಕ್ಕೆ 31,952 ರೂಪಾಯಿಗಳನ್ನು ಮತ್ತು ನಗರ ಪ್ರದೇಶಕ್ಕೆ 42,412 ರೂಪಾಯಿಗಳು ಇವೆ. ಇದೆಲ್ಲವನ್ನು ನೋಡಿದಾಗ ನಾವು ಕೊಡುವಂಥ 22,000 ರೂಪಾಯಿಗಳು ಬಹಳ ಕಡಿಮೆಯಾಯಿತು, ಅದನ್ನು ತಾವು ಜಾಸ್ತಿ ಮಾಡಬೇಕಾಗುತ್ತದೆ. ಇದನ್ನು ಜಾಸ್ತಿ ಮಾಡದೇ ಹೋದರೆ ಈಗಾಗಲೇ BPL Cardಗೆ 40,000, 50,000 ರೂಪಾಯಿಗಳೋ ಮಾಡಬೇಕೆಂಬ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿದೆ. ಆದುದರಿಂದ ನಾನು ಕೇಳಿಕೊಳ್ಳುವುದೇನೆಂದರೆ atleast ಇದನ್ನು 50,000 ರೂಪಾಯಿಗಳಿಂದ 60,000 ರೂಪಾಯಿಗಳವರೆಗೆ ಮಾಡಿದರೆ ಅನುಕೂಲವಾಗುತ್ತದೆ. ತಾವು ಈಗಾಗಲೇ KMDCಯಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ತಾವು 57, 754 ಜನರಿಗೆ ಕೊಟ್ಟಿದ್ದೀರಿ. ಇವರು ಕೇವಲ 60,000ದೊಳಗೆ ಇದ್ದಾರೆ. ಈ ರಾಜ್ಯದಲ್ಲಿ ಅಲ್ಪಸಂಖ್ಯಾತರು ಎಷ್ಟು percentage ಇದ್ದಾರೆಂಬುದು ತಮಗೆಲ್ಲರಿಗೂ ಗೊತ್ತಿದೆ. ಅದರಲ್ಲಿ ತಾವು ಬರೀ 57,000 ಜನರಿಗೆ ಕೊಟ್ಟರೆ ಸಾಕಾಗುವುದಿಲ್ಲವೆಂದು ನನ್ನ ಅನಸಿಕೆ, ತಾವು ಈ 22,000ವನ್ನು ಹೆಚ್ಚಿಗೆ ಮಾಡಿದರೆ ಇನ್ನಷ್ಟು ಜನರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ, ಇದಲ್ಲದೇ income certificate ತೆಗೆದುಕೊಂಡು ಹೋಗಬೇಕಾಗುತ್ತದೆ.

ಅಧ್ಯಕ್ಷರು : ತಾವು ಏನಾಗಬೇಕೆಂಬ ಬಗ್ಗೆ ಮಂತ್ರಿಗಳಿಗೆ ಪ್ರಶ್ನೆ ಕೇಳಿ, ಇದು ಸರಿಯೋ, ತಪ್ಪೋ, ತಮ್ಮ ಸಲಹೆ ಕೊಡಿ.

ಶ್ರೀ ಎನ್.ಎ. ಹ್ಯಾರಿಸ್ : ಮಾನ್ಯ ಅಧ್ಯಕ್ಷರೆ, ಈಗ ಇರುವ 22,000 ರೂಪಾಯಿಗಳನ್ನು ಹೆಚ್ಚು ಮಾಡಿ, ಅದನ್ನು 60,000 ರೂಪಾಯಿಗಳಿಗಾದರೂ ತರಬೇಕು. ಅದರ ಜೊತೆಯಲ್ಲಿ Housing Loan provision ಅನ್ನು ಇದರಲ್ಲಿ ಇಡಬೇಕು, ಏಕೆಂದರೆ ಸಣ್ಣ ಗುಡಿಸಲಿನಲ್ಲಿರುವವರು 30,000, 40,000 ರೂಪಾಯಿಗಳಿಗೆ ಇವತ್ತು slum clearance ನಿಂದ, JNUನಿಂದ ಮನೆಗಳನ್ನು ಕಟ್ಟಿಕೊಡುತ್ತಿದ್ದಾರೆ. ಆದರೆ ಅದಕ್ಕೆ ಕಟ್ಟಬೇಕಾಗಿರುವಂಥಾ ದುಡ್ಡನ್ನು ಕಟ್ಟುವುದಕ್ಕೆ ಇವರ ಬಳಿ ಹಣವಿರುವುದಿಲ್ಲ.

ಅಧ್ಯಕ್ಷರು : ತಾವು ಅದನ್ನು ಹೆಚ್ಚು ಮಾಡುವುದಕ್ಕೆ ಸಲಹೆ ಕೊಡಿ.

ಶ್ರೀ ಎನ್.ಎ. ಹ್ಯಾರಿಸ್ : ಮಾನ್ಯ ಅಧ್ಯಕ್ಷರೆ, Housing Loan ಸೇರಿಸುವಂಥಾದ್ದು ಮತ್ತು ಹೆಣ್ಣು ಮಕ್ಕಳಿಗೆ educationಗೆ ಒಂದು special scheme ಅನ್ನು introduce

ಮಾಡಿದರೆ ಚೆನ್ನಾಗಿರುತ್ತದೆ, 60,000 ರೂಪಾಯಿಗಳನ್ನು basic increase ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಯವರೆ ಉತ್ತರ ಕೊಡಿ.

ಪ್ರೊ. ಡಾ॥ ಮುಮ್ತಾಜ್ ಅಲಿ ಖಾನ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮುಖ್ಯ ಧ್ಯೇಯ ಬಡವರನ್ನು ಗುರುತಿಸಿ, ಅವರಿಗೆ ಯಾವ್ಯಾವ ರೀತಿಯಲ್ಲಿ ಅವರಿಗೆ ಸಹಾಯ ಮಾಡಬೇಕೋ, ಅದನ್ನು ಮಾಡಿ, ಅದರಿಂದ ಅವರು ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಉತ್ತಮಗೊಳ್ಳಬೇಕಾಗಿದೆ. ಅವರಲ್ಲಿ ಪರಿವರ್ತನೆಯನ್ನು ಕಂಡುಕೊಳ್ಳಬೇಕಾಗಿದೆ. ಇದಕ್ಕೆ ಎಲ್ಲಾ ಸರ್ಕಾರಗಳು ಬದ್ಧವಾಗಿವೆ. ಈಗ ಮಾನ್ಯ ಸದಸ್ಯರು ಹೇಳಿದಂಥ ಮಾತುಗಳನ್ನು ನಾನು ಖಂಡಿತವಾಗಿ ಅನುಮೋದಿಸುತ್ತೇನೆ, ಒಂದು ವೇಳೆ 22,000 ರೂಪಾಯಿಗಳು ಸಾಲದೆಂದರೆ ಇನ್ನು ಮುಂದೆ ತೆಗೆದುಕೊಳ್ಳುವ ಉದ್ದೇಶವೂ ಇದೆ. ಅಲ್ಪ ಸಂಖ್ಯಾತರ ಕಲ್ಯಾಣಕ್ಕೆ ಎಷ್ಟು ಬೇಕೊ ಅಷ್ಟನ್ನು ಕೊಡುವುದಕ್ಕೆ ನಾವು ಸಿದ್ಧವಾಗಿದ್ದೇವೆ. ಇದರಲ್ಲಿ ಎರಡನೇಯ ಮಾತಿಲ್ಲ, ಮಾನ್ಯ ಸದಸ್ಯರು ಹೇಳಿದ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ಇದನ್ನು ಸೂಕ್ತವಾದ ರೀತಿಯಲ್ಲಿ ಪರಿವರ್ತನೆ ಮಾಡುವ ಭರವಸೆಯನ್ನು ನಾನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ಖಮರುಲ್ ಇಸ್ಲಾಂ : Sir, It is the most unrealistic, because the minimum wage of the labour itself.. you count it, even a labour could not entitle. Rs. 22,000 is the so unrealistic eligible condition and your Government is not ready to fix it. (interruption).

ಅಧ್ಯಕ್ಷರು : ಅದು ಯಾವಾಗ fix ಆಗಿದ್ದು ?

ಶ್ರೀ ಖಮರುಲ್ ಇಸ್ಲಾಂ : Sir, it is the same question what Mr. Haris has put the question.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ inflation rate 4% ಇದ್ದದ್ದು ಈಗ 9% ಆಗಿದೆ.

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಮಂತ್ರಿಗಳೇ, ತಾವು ಈ ಸದನದಲ್ಲಿ ಆಶ್ವಾಸನೆಯನ್ನು ಕೊಡಬೇಕು. that you are going to raise it, You assure it specifically, otherwise what is the use of sanctioning Rs. 143 crores by your Government. ?

ಅಧ್ಯಕ್ಷರು : ಆಯಿತು, ಮಾನ್ಯ ಮಂತ್ರಿಗಳೇ, ಉತ್ತರವನ್ನು ಕೊಡಿ.

ಪ್ರೊ.ಡಾ॥ ಮುಮ್ತಾಜ್ ಅಲಿ ಖಾನ್ : ಮಾನ್ಯ ಅಧ್ಯಕ್ಷರೆ, ಇದು ಹಿಂದಿನ ಸರ್ಕಾರದಿಂದ ಆಗಿರುವಂಥಾ ನಿಯಮ.

ಶ್ರೀ ಆರ್. ರೋಷನ್‌ಬೇಗ್ : ಅದನ್ನು ಬಿಟ್ಟು ಬಿಡಿ, ಈಗ ಏಕೆ ಬೇಕು ?

ಪ್ರೊ. ಡಾ॥ ಮುಮ್ತಾಜ್ ಅಲಿ ಖಾನ್ : ನಾನು ಉತ್ತರ ಕೊಡುತ್ತೇನೆ.

ಪ್ರೊ. ಡಾ॥ ಮುಮ್ತಾಜ್ ಅಲಿ ಖಾನ್ : ಆದರೆ, ನಮ್ಮ ಧ್ಯೇಯ ಇರುವುದು ಇನ್ನೂ ಉತ್ತಮವಾಗಬೇಕು ಎನ್ನುವುದಾಗಿದೆ. ನಿಮ್ಮ ಸಲಹೆಯನ್ನು ನಾವು ಒಪ್ಪಿಕೊಳ್ಳುತ್ತೇವೆ. 22,,000 ರೂಪಾಯಿಗಳು ಸಾಲದು ಎನ್ನುವುದನ್ನು ನಾವೂ ಸಹ ಒಪ್ಪಿಕೊಳ್ಳುತ್ತೇವೆ. ಅದನ್ನು ಇನ್ನೂ ಹೆಚ್ಚು ಮಾಡಲು ನಮ್ಮ ಅಭ್ಯಂತರವಿಲ್ಲ. ತಾವು ಹೇಳಿರುವುದು ಸರಿಯಾಗಿದೆ. ಅದನ್ನು ಮುಂದೆ ಮಾಡುತ್ತೇವೆ.

ಶ್ರೀ ಯು.ಟಿ. ಖಾದರ್ : ಅಲ್ಪಸಂಖ್ಯಾತರ ಇಲಾಖೆಯ ವತಿಯಿಂದ ಜಿಲ್ಲಾಮಟ್ಟದಲ್ಲಿ ಈ ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಬಹಳಷ್ಟು ಬಡ ರೈತರು ಗ್ರಾಮೀಣ ಮಟ್ಟದಲ್ಲಿದ್ದಾರೆ. ಜಿಲ್ಲೆಯಲ್ಲಿ ಒಂದು ಇಲಾಖೆಯ ಕಛೇರಿಯನ್ನು ಪ್ರಾರಂಭಿಸಿದ್ದು ಈಗ ಏನಾಗಿದೆ ಎಂದರೆ, ಅಲ್ಲಿ ಅದನ್ನು ತೆಗೆದುಕೊಳ್ಳುವ ಶಕ್ತಿ ಇರುವವರು ಯಾರಿದ್ದಾರೆ, ಅವರು ಮಾತ್ರ ಅದನ್ನು ಪಡೆದುಕೊಂಡು ಹೋಗುತ್ತಿದ್ದಾರೆ. ಗ್ರಾಮೀಣ ಮಟ್ಟದಲ್ಲಿರುವವರಿಗೆ, ಯಾರಿಗೆ ಶಕ್ತಿ ಇಲ್ಲ, ಯಾರಿಗೆ ಧ್ವನಿ ಇಲ್ಲ ಅವರು ಅಲ್ಲೇ ಉಳಿಯುವಂಥ ಕೆಲಸವಾಗಿದೆ. ಮಾವ್ಯ ಸಚಿವರ ಹತ್ತಿರ ನನ್ನ ಕಳಕಳಿ ಏನೆಂದರೆ, ಈ ಒಂದು ಯೋಜನೆಯನ್ನು ಪ್ರತಿ ಗ್ರಾಮ ಪಂಚಾಯಿತಿ ಮಟ್ಟಕ್ಕೆ ಮುಟ್ಟಿಸಿ, ಗ್ರಾಮ ಪಂಚಾಯಿತಿಯ ಮುಖಾಂತರ ಕೊಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ನಾನು ಸಚಿವರನ್ನು ಅಭಿನಂದಿಸಬೇಕಾಗುತ್ತದೆ. ಏಕೆಂದರೆ, ಹಜ್‌ಗೆ ಸಂಬಂಧಪಟ್ಟಂತೆ, ಅತ್ಯಂತ ಪ್ರಾಮಾಣಿಕತೆಯಿಂದ, ದಕ್ಷತೆಯಿಂದ ಆಗಿರುವುದರಿಂದ ನಾನು ಅಭಿನಂದಿಸುತ್ತೇನೆ.

ಅಧ್ಯಕ್ಷರು : ಅದನ್ನು ಪಾರದರ್ಶಕವಾಗಿ ಮಾಡಿದ್ದಾರೆ.

ಶ್ರೀ ಹ್ಯಾರಿಸ್ ಎನ್.ಎ. : ನಮ್ಮ ಸಚಿವರಿಗೆ ಧನ್ಯವಾದಗಳು. ನಾನು ಇನ್ನೂ ಎರಡು ಪ್ರಶ್ನೆಗಳನ್ನು ಕೇಳಿದ್ದೇನೆ. ಅವುಗಳಿಗೆ ಅವರು ಉತ್ತರ ಹೇಳಲಿಲ್ಲ. ಒಂದು, Housing Loan to be included in this. ಎರಡನೆಯದು, ಹೆಣ್ಣು ಮಕ್ಕಳ education purposeಗೋಸ್ಕರ ಒಂದು ಸ್ಕೀಮ್‌ನ್ನು ಮಾಡಬೇಕು. ಮೈನಾರಿಟಿ ಎಂದ ತಕ್ಷಣ ಅದರಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಕ್ಕರು ಎಲ್ಲರೂ ಬರುತ್ತಾರೆ. ಇವರೆಲ್ಲರಿಗೂ ಉನ್ನತ ಶಿಕ್ಷಣ

ಸಿಗದಿದ್ದರೆ ಒಂದು ಒಳ್ಳೆಯ ಸಮಾಜ ನಿರ್ಮಾಣವಾಗಲು ಸಾಧ್ಯವಾಗುವುದಿಲ್ಲ. ಸರ್ಕಾರಿ ಶಾಲೆಗಳಿರಬಹುದು. ಆದರೂ ಇವತ್ತು ಒಂದು ಒಳ್ಳೆಯ educationಗೆ private institutionಗೆ ಹೋಗಬೇಕಾಗುತ್ತದೆ.

ಅಧ್ಯಕ್ಷರು : ಸದಸ್ಯರೇ, ನೇರವಾಗಿ ಪ್ರಶ್ನೆ ಕೇಳಿ. ಈ ರೀತಿ ಭಾಷಣ ಮಾಡಲು ನಾನು ಬಿಡುವುದಿಲ್ಲ. ಏನಾಗಬೇಕು ಎಂದು ನೇರವಾಗಿ ಹೇಳಬಿಡಿ. ಪ್ರಶ್ನೋತ್ತರ ಕಾಲದಲ್ಲಿ ಭಾಷಣ ಮಾಡಲಿಕ್ಕೆ ಅವಕಾಶ ಕೊಡವುದಿಲ್ಲ. ಏನಾಗಬೇಕು ಎಂದು ನೇರವಾಗಿ ಕೇಳಿ. ನನು ಹೇಳಿದಂಥ schemeಅನ್ನು includeಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅವರು ಕೇಳುತ್ತಿರತಕ್ಕಂಥಾದ್ದು ಎರಡನೇ ಪ್ರಶ್ನೆ. ಮೊದಲನೆಯದು ಏನೆಂದರೆ, ಈ ಯೋಜನೆಯನ್ನು ಹೆಣ್ಣುಮಕ್ಕಳಿಗೂ ಕೂಡ ಅನ್ವಯಿಸಬೇಕು ಮತ್ತು ಅವರ educationಗೆ ಸಹಾಯ ಮಾಡಬೇಕು ಎನ್ನುವುದು. Housing Scheme ಇದರಲ್ಲಿ include ಮಾಡಿ ಎನ್ನುವುದು ಇನ್ನೊಂದು. ಇವೆರಡನ್ನೂ ಈ schemeನಲ್ಲಿ ತಂದರೆ ಉಪಯೋಗವಾಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಕೇಳುತ್ತಿದ್ದಾರೆ. ಅದಕ್ಕಾಗಿ, ದಯವಿಟ್ಟು ಇವೆರಡಕ್ಕೂ ಉತ್ತರ ಕೊಡಬೇಕು.

ಪ್ರೊ.ಡಾ॥ ಮುಮ್ತಾಜ್ ಅಲಿ ಖಾನ್ : ಮುಕ್ತ ಮನಸ್ಸಿನಿಂದ ನಿಮ್ಮ ಸಲಹೆಗಳನ್ನು ಈ ವರ್ಷದಿಂದ ಅನುಷ್ಠಾನಕ್ಕೆ ತರುತ್ತೇವೆ.

(177) **ಶ್ರೀ ನಾಯ್ಕ್ ಜೆ.ಡಿ. (ಭಟ್ಕಳ) :-- ಮಾನ್ಯ** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಭಟ್ಕಳದ ಸರ್ಕಾರಿ ಆಸ್ಪತ್ರೆಗೆ ಯಾವ ಯೋಜನೆಯಡಿ ಹೊಸ ಕಟ್ಟಡ ಕಟ್ಟಲಾಗುತ್ತಿದೆ

ಆ) ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ;

ಇ) ಕಟ್ಟಡ ಗುಣಮಟ್ಟವನ್ನು ಪರೀಕ್ಷಿಸುವವರು ಯಾರು (ವಿವರ ನೀಡುವುದು)?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಉತ್ತರ ಕನ್ನಡ ಜಿಲ್ಲೆ ಭಟ್ಕಳದ ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು (50 ಹಾಸಿಗೆಗಳಿಂದ 100 ಹಾಸಿಗೆಗಳ ಸಾಮರ್ಥ್ಯಕ್ಕೆ) ಮೇಲ್ದರ್ಜೆಗೇರಿಸುವ ಕಾಮಗಾರಿಯನ್ನು ರಾಜ್ಯ ಯೋಜನೆ ಕಾರ್ಯಕ್ರಮಗಳ ಲೆಕ್ಕಶೀರ್ಷಿಕೆ 4210–0–1–110–1–01–139 (ಪ್ರಧಾನ ಕಾಮಗಾರಿಯ) ಅಡಿಯಲ್ಲಿ ಕೈಗೊಳ್ಳಲಾಗಿದೆ.

ಆ) ಕಾಮಗಾರಿಯ ಅಂದಾಜು ಮೊತ್ತ ರೂ. 244.00 ಲಕ್ಷಗಳು.

ಇ) ಈ ಕಾಮಗಾರಿ ಉಸ್ತುವಾರಿಯಲ್ಲಿ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ